ಶ್ರೀ ಟಿ.ಬಿ.ಜಯಚಂದ್ರ :- ಕೇಂದ್ರ ಸರ್ಕಾರ ಕಾಯ್ದೆ ಮಾಡಿದೆ. ಇವರೇನೂ ಅನುಷ್ಠಾನ ಮಾಡಿಲ್ಲ. ಇದನ್ನು ಅರ್ಧ ಗಂಟೆಗಳ ಕಾಲ ಚರ್ಚೆಗೆ ತೆಗೆದುಕೊಂಡರೆ ಖಂಡಿತ ಒಳ್ಳೆಯದಾಗುತ್ತದೆ.

ಶ್ರೀ ಸಿ.ಪಿ.ಯೋಗೇಶ್ವರ್ :- ಅರ್ಧ ಗಂಟೆ ಕಾಲ ಚರ್ಚೆಗೆ ಕಾಲಾವಕಾಶ ಕೊಟ್ಟರೆ ಚರ್ಚೆ ಮಾಡಬಹುದು.

ಉಪಾಧ್ಯಕ್ಷರು:- ಇದನ್ನು ಅರ್ಧ ಗಂಟೆ ಕಾಲ ಚರ್ಚೆಗೆ ಕಾಯ್ದಿರಿಸಲಾಗಿದೆ.

7. **ವಿಷಯ:ಆನೆಚೌಕೂರು-ಹಳೇಬೀಡು-ಹಾಸನ-ಗೊರೂರು-ಅರಕಲಗೂಡು- ರಾಮನಾಥಪುರ ಪಿರಿಯಾಪಟ್ಟಣ ರಸ್ತೆ ಸಂಚಾರಕ್ಕೆ ಯೋಗ್ಯವಿಲ್ಲದಿರುವ ಬಗ್ಗೆ.**

ಶ್ರೀ ಹೆಚ್.ಕೆ.ಕುಮಾರಸ್ವಾಮಿ (ಸಕಲೇಶಪುರ):-ಮಾನ್ಯ ಅಧ್ಯಕ್ಷರೆ, ಆನೆಚೌಕೂರು - ಹಳೇಬೀಡು-ಹಾಸನ- ಗೊರೂರು-ಅರಕಲಗೂಡು-ರಾಮನಾಥಪುರ ಪಿರಿಯಾಪಟ್ಟಣ ರಸ್ತೆ ಪ್ರಮುಖ ರಾಜ್ಯ ಹೆದ್ದಾರಿಯಾಗಿದ್ದು ಸಂಚಾರಕ್ಕೆ ಯೋಗ್ಯವಿಲ್ಲದಿರುವ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರಗಮನವನ್ನು ಸೆಳೆಯುತ್ತೇನೆ.

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):- ಮಾನ್ಯ ಉಪಾಧ್ಯಕ್ಷರೆ,

ಹಳೆಬೀಡು – ಹಾಸನ ಗೊರೂರು ವೃತ್ತದಿಂದ ಅರಕಲಗೂಡು ರಾಮನಾಥಪುರ ಪಿರಿಯಾಪಟ್ಟ ಆನೆಚಾಕೂರು ರಾಜ್ಯ ಹೆದ್ದಾರಿ–21 ಒಟ್ಟು 123.17 ಕಿ.ಮೀ. ಉದ್ದ ಇರುತ್ತದೆ. ಈ ವರೆಗೆ ಸದರಿ ರಸ್ತೆಯ ಅಭಿವೃದ್ಧಿಗೆ ಕೆಳಕಂಡಂತೆ ಕಾಮಗಾರಿಗಳು ವಿವರ.

1. ಕಿ.ಮೀ. 0.00 ರಿಂದ ಕಿ.ಮೀ. 2.40 ವರೆಗೆ ರೂ.100 ಲಕ್ಷಗಳ ಪ್ರವಾಸೋದ್ಯಮ ಅನುದಾನದಲ್ಲಿ ಮರುಡಾಂಬರೀಕರಣ ಕಾಮಗಾರಿಯನ್ನು ಪೂರೈಸಿದೆ.

2. ಕಿ.ಮೀ. 2.40 ರಿಂದ ಕಿ.ಮೀ. 3.00 ವರೆಗೆ ರೂ.36.09 ಲಕ್ಷಗಳ ಎಸ್.ಡಿ.ಪಿ ಅನುದಾನದಲ್ಲಿ ಮರುಡಾಂಬರೀಕರಣ ಕಾಮಗಾರಿಗಾಗಿ ಟೆಂಡರ್ ಕರೆಯಲಾಗಿದೆ.
3. ಕಿ.ಮೀ. 3.00 ರಿಂದ 12.90 ಕಿ.ಮೀ. ವರೆಗೆ ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚಿ ನಿರ್ವಹಣೆ ಮಾಡಲು ರೂ.9.80 ಲಕ್ಷಗಳ ಕಾರ್ಯಕ್ರಮ ಪಟ್ಟಿಯಲ್ಲಿ ಸೇರ್ಪಡೆ ಮಾಡಲಾಗಿದೆ.
4. ಕಿ.ಮೀ. 12.90 ರಿಂದ ಕಿ.ಮೀ. 30.50 ಆಯ್ದಭಾಗಗಳಲ್ಲಿ 5.50 ಕಿ.ಮೀ. ರಸ್ತೆಗೆ ಮರುಡಾಂಬರೀಕರಣ ಕಾಮಗಾರಿ ಮಾಡಲಾಗಿದೆ.
5. ಕಿ.ಮೀ 30.50 ರಿಂದ ಕಿ.ಮೀ. 54.75 ಒಟ್ಟು 24.25 ಕಿ.ಮೀ. ಉದ್ದದ ರಸ್ತೆಯಲ್ಲಿ ಗುಂಡಿ ಮುಚ್ಚಲು ರೂ.34.84 ಲಕ್ಷಗಳಿಗೆ ಟೆಂಡರ್ ಗೊತ್ತುಪಡಿಸಲಾಗಿದ್ದು, 30.11.2012 ರಂದು ಹೆಚ್ಚುವರಿ ಅನುದಾನ ರೂ.25.00 ಲಕ್ಷ ಬಿಡುಗಡೆ ಮಾಡಲಾಗಿದೆ.
6. ಕಿ.ಮೀ. 78.00 ರಿಂದ ಕಿ.ಮೀ. 80.00 ವರೆಗೆ ಆಯ್ದಭಾಗಗಳಲ್ಲಿ ಅಭಿವೃದ್ಧಿ ಕಾಮಗಾರಿಯನ್ನು ವಿಶೇಷ ಅಭಿವೃದ್ಧಿ ಯೋಜನೆ (ಎಸ್.ಡಿ.ಪಿ) ಅಡಿಯಲ್ಲಿ ಅಂದಾಜು ಮೊತ್ತ ರೂ.60.00 ಲಕ್ಷಗಳಿಗೆ ತಾಂತ್ರಿಕ ಮಂಜೂರಾತಿ ನೀಡಲಾಗಿದ್ದು ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.
7. ಕಿ.ಮೀ. 58.80 ರಿಂದ ಕಿ.ಮೀ. 83.00 ವರೆಗೆ ಆಯ್ದಭಾಗಗಳಲ್ಲಿ 2012–13ನೇ ಸಾಲಿನ ಅಪೆಂಡಿಕ್ಸ್–ಇ ಕಾರ್ಯಕ್ರಮ ಪಟ್ಟಿಯಲ್ಲಿ ರೂ.240.00 ಲಕ್ಷಗಳಲ್ಲಿ ಒಟ್ಟು 4.25 ಕಿ.ಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆಯಲ್ಲಿ ಸೇರ್ಪಡೆಗೊಳಿಸಲಾಗಿದೆ.
8. ಕಿ.ಮೀ. 58.80 ರಿಂದ ಕಿ.ಮೀ. 83.00 ವರೆಗೆ ಆಯ್ದಭಾಗಗಳಲ್ಲಿ 2012–13ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 3054 ರಾಜ್ಯ ಹೆದ್ದಾರಿ ಯೋಜನೆಯಡಿ ರೂ.6.04 ಲಕ್ಷಗಳಿಗೆ ಹಾಗೂ 13ನೇ ಅನುವು ಮಾಡಿಕೊಡಲು ಕ್ರಮ ಕೈಗೊಳ್ಳಲಾಗಿರುತ್ತದೆ.
9. ಹಾಸನ–ಅರಕಲಗೂಡು–ರಾಮನಾಥಪುರ–ಗಂಗೂರು–ಪಿರಿಯಾಪಟ್ಟಣ ಕಿ.ಮೀ. 30.50 ರಿಂದ ಕಿ.ಮೀ. 107.10 ವರೆಗೆ ಒಟ್ಟು 76.60 ಕಿ.ಮೀ. ಉದ್ದದ ರಸ್ತೆಗೆ ರೂ.140.22 ಕೋಟಿಗಳ ಅಂದಾಜಿನೊಂದಿಗೆ ರಸ್ತೆಯ ಅಭಿವೃದ್ಧಿಯನ್ನು ವಿಶ್ವ ಬ್ಯಾಂಕಿನ ಸಹ ಆರ್ಥಿಕ ನೆರವಿನ (World Bank Co-financing Scheme) ಅಡಿಯಲ್ಲಿ ಕೈಗೆತ್ತಿಕೊಳ್ಳಲು ಯೋಜಿಸಲಾಗಿದೆ.
10. ಮೈಸೂರು ಜಿಲ್ಲೆ ಲೋಕೋಪಯೋಗಿ ಇಲಾಖೆಯ ಹುಣಸೂರು ವಿಭಾಗದ ಪಿರಿಯಾಪಟ್ಟಣ ಉಪ ವಿಭಾಗ ವ್ಯಾಪ್ತಿಯಲ್ಲಿ ಕಿ.ಮೀ. 89.57 ರಿಂದ

ಕಿ.ಮೀ. 123.17ರ ವರೆಗೆ ಒಟ್ಟು 33.60 ಕಿ.ಮೀ. ಗಳಷ್ಟು ಉದ್ದದ ಸದರಿ ರಸ್ತೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ವಿವಿಧ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆಯಾದ ಅನುದಾನದಲ್ಲಿ 6.15 ಕಿ.ಮೀ. ಗಳಷ್ಟು ಉದ್ದದ ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗಿರುವ ವಿವರ.

ಕಿ.ಮೀ. 100.90 ರಿಂದ ಕಿ.ಮೀ. 101.60 ವರೆಗೆ = 0.71 ಕಿ.ಮೀ.
(ಸುವರ್ಣ ಯೋಜನೆ)

ಕಿ.ಮೀ. 105.55 ರಿಂದ ಕಿ.ಮೀ. 105.90 ವರೆಗೆ = 0.35 ಕಿ.ಮೀ.
(ಡಾ:ನಂಜುಂಡಪ್ಪ ಯೋಜನೆ)

ಕಿ.ಮೀ. 107.50 ರಿಂದ ಕಿ.ಮೀ. 112.00 ವರೆಗೆ = 4.50 ಕಿ.ಮೀ.
(ಕ ರಾ ಹೆ ನವೀಕರಣ)

ಕಿ.ಮೀ. 105.96 ರಿಂದ ಕಿ.ಮೀ. 106.40 ವರೆಗೆ = 0.44 ಕಿ.ಮೀ.
(3054–ಯೋಜನೇತರ)

11. ಹಾಗೂ ಪ್ರಸಕ್ತ 2012–13ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3054–13ನೇ ಹಣಕಾಸು ಯೋಜನೆಯಡಿ ಬಿಡುಗಡೆಯಾದ ಅನುದಾನದಲ್ಲಿ 6.00 ಕಿ.ಮೀ. ಗಳಷ್ಟು ಉದ್ದದ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಯೋಜಿಸಲಾಗುತ್ತಿದೆ.

ಕಿ.ಮೀ. 96.50 ರಿಂದ ಕಿ.ಮೀ. 100.90 ವರೆಗೆ = 4.40 ಕಿ.ಮೀ.
ಕಿ.ಮೀ. 103.90 ರಿಂದ ಕಿ.ಮೀ. 105.65 ವರೆಗೆ = 1.75 ಕಿ.ಮೀ.

12. ಕಿ.ಮೀ. 96.50 ರಿಂದ ಕಿ.ಮೀ. 98.25 ವರೆಗೆ ಮತ್ತು ಕಿ.ಮೀ. 103.70 ರಿಂದ ಕಿ.ಮೀ. 105.65 ವರೆಗೆ ಒಟ್ಟು 3.35 ಕಿ.ಮೀ. ಉದ್ದದಲ್ಲಿ ರೂ.118.00 ಲಕ್ಷಗಳ ಮೊತ್ತದಲ್ಲಿ 13ನೇ ಹಣಕಾಸು ಯೋಜನೆ ಅಡಿಯಲ್ಲಿ ಅಭಿವೃದ್ಧಿ ಪಡಿಸಲು ಯೋಜಿಸಲಾಗುತ್ತಿದೆ.

13. ಕಿ.ಮೀ. 89.57 ರಿಂದ ಕಿ.ಮೀ. 103.90 ವರೆಗೆ ಆಯ್ದಭಾಗಗಳಲ್ಲಿ ರಸ್ತೆಯನ್ನು ಅಭಿವೃದ್ಧಿಪಡಿಸಲು ರೂ.350.00 ಲಕ್ಷಗಳಿಗೆ ದಿನಾಂಕ 6–11–2012 ರಲ್ಲಿ ಟೆಂಡರನ್ನು ಆಹ್ವಾನಿಸಲಾಗಿದ್ದು ಕಾಮಗಾರಿಯನ್ನು ಸಧ್ಯದಲ್ಲಿಯೇ ಪ್ರಾರಂಭಿಸಲಾಗುವುದು.

14. ಈ ರೀತಿ ಅನೇಕ ಯೋಜನೆಗಳಲ್ಲಿ ಸದರಿ ರಸ್ತೆಯನ್ನು ಸುಗಮ ವಾಹನ ಸಂಚಾರಕ್ಕಾಗಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕಾಲ ಕಾಲಕ್ಕೆ ರೂಪಿಸಲಾಗುತ್ತಿದೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ಏನು ರಾಜ್ಯ ಹೆದ್ದಾರಿ ಸಂಖ್ಯೆ ೨೧ ಇದೆ, ಸುಮಾರು ೧೨೩ ಕಿ.ಮೀ. ಏದು ಜನ ವಿಧಾನ ಸಭಾ ಕ್ಷೇತ್ರಗಳ ಶಾಸಕರ ವ್ಯಾಪ್ತಿಗೆ ಬರುತ್ತದೆ. ಮಾನ್ಯ ರುದ್ರೇಶ್ ಗೌಡರು, ಹೆಚ್. ಎಸ್.ಪ್ರಕಾಶ್‌ರವರು, ಎ.ಮಂಜುರವರು, ನಾನು ಮತ್ತು ಕೆ.ವೆಂಕಟೇಶ್‌ರವರು ಎಷ್ಟೊಂದು ಪ್ರಮುಖವಾದಂಥ ರಾಜ್ಯ ಹೆದ್ದಾರಿ ಎಂದು ಸದನಕ್ಕೆ ಗೊತ್ತಾಗುತ್ತದೆ ಎಂದು ನಾನು ಭಾವಿಸಿದ್ದೇನೆ. ಆ ರಸ್ತೆ ಹೇಗಿದೆ ಎಂದರೆ ಮೊನ್ನೆ ನಮ್ಮ ಸ್ಥಳೀಯ ದಿನ ಪತ್ರಿಕೆಯಲ್ಲಿ ಒಂದು ಪ್ರಕಟಣೆ ಮಾಡಿದ್ದರು. ಬಹುಶ: ಶಾಸಕರನ್ನು ಎಷ್ಟರ ಮಟ್ಟಿಗೆ ವಾಚಾಮಗೋಚರವಾಗಿ ಬೈದರು ಎಂದರೆ ಎಷ್ಟರ ಮಟ್ಟಿಗೆ ಹೇಳಬಹುದೋ ಅಷ್ಟನ್ನು ಹೇಳಿದ್ದಾರೆ.ಜನ ಪತ್ರಿಕೆ ನೋಡಿ ನಾವೆಲ್ಲರೂ ಹೇಳಿದ್ದರೂ ಏನೂ ಆಗಿರಲಿಲ್ಲ ಮಾನ್ಯ ಶಾಸಕರು ನಮ್ಮ ಮಾತನ್ನು ಕೇಳಿರಲಿಲ್ಲ, ಈ ಸರ್ಕಾರ ಕಿವುಡು ಸರ್ಕಾರ. ಸರ್ಕಾರಕ್ಕೂ ಕೂಡ ಕಿವಿ ಕೇಳಿಸಿರಲಿಲ್ಲ. ಕಣ್ಣೂ ಕಾಣದೆ ರಸ್ತೆ ನೋಡಿರಲಿಲ್ಲ.ಈ ಪೇಪರ್‌ನವರು ಸರಿಯಾಗಿ ಬರೆದಿದ್ದಾರೆಂದು ಎಲ್ಲರೂ ನೋಡಿ ನಗುತ್ತಿದ್ದರು. ರಸ್ತೆ ಅಷ್ಟು ಕೆಟ್ಟದಾಗಿದೆ. ಇಲ್ಲಿ ಮಾನ್ಯ ಸಚಿವರು ನಮಗೊಂದು ಉತ್ತರ ಕೊಟ್ಟಿದ್ದಾರೆ. ಆ ೧೨೩ ಕಿ.ಮೀ.ಅನ್ನು ೧೩ ಹಂತಗಳನ್ನು ಮಾಡಿ,ಇಂತಿಂಥ ಕಿ.ಮೀ.ಗೆಇಷ್ಟಿಷ್ಟು ಮಂಜೂರು ಮಾಡಿದ್ದೇವೆಂದು, ಗುಂಡಿ ಮುಚ್ಚುತ್ತಿದ್ದೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ನಮ್ಮ ಹಿಂದಿನ ಮುಖ್ಯಮಂತ್ರಿಗಳು. ೨೦೧೧-೨೦೧೨ನೇ ಸಾಲಿನಲ್ಲಿ ಜನವರಿ ೧೫ ರೊಳಗೆ ಇಡೀ ರಾಜ್ಯದಲ್ಲಿ ಯಾವುದೇ ರಸ್ತೆಯಲ್ಲಿ ಒಂದೇ ಒಂದು ಗುಂಡಿ ಇರುವುದಿಲ್ಲವೆಂದು ಆ ರೀತಿಯಲ್ಲಿ ನಾವು ಗುಂಡಿ ಮುಚ್ಚುತ್ತೇವೆಂದು ಹೇಳಿದ್ದರು. ಒಂದೇ ಒಂದು ಗುಂಡಿ ಇಲ್ಲ ನಿಜ.ಆದರೆ ಲಕ್ಷಾಂತರ ಗುಂಡಿಗಳು ಇವೆ, ಕೋಟಿ ಗುಂಡಿಗಳು ಇರಬಹುದು.ನನ್ನ ಕ್ಷೇತ್ರವಾದ ಸಕಲೇಶಪುರದಲ್ಲಿ ತಮಗೆಗೊತ್ತಿರುವ ಹಾಗೆ ೪೦% ಗುಂಡಿ ಮುಚ್ಚಿರಬಹುದು.ಗುಂಡಿ ಮುಚ್ಚಿದ್ದರೂ ಕೂಡ ಮಳೆ ಬಂದ ಮೇಲೆ ಇನ್ನು ೧೫ ದಿನ ಅಥವಾ ಒಂದು ತಿಂಗಳಿಗೆ ಪುನ: ಪುನ: ಅದೇ ಕಥೆ ಆಗುತ್ತದೆ. ಈ ರಸ್ತೆಗೆ ಮಾತ್ರ ಬರುತ್ತೇನೆ. ತಾವು ಒಂದು ೩೫ ಲಕ್ಷ ರೂ.

ಮಂಜೂರು ಮಾಡಿದ್ದೀರಿ. ೩೪ ಕಿ.ಮೀ.ಗೆ ೩೨ ಲಕ್ಷ ಮಂಜೂರು ಮಾಡಿದ್ದಾರೆ. ಒಂದು ಕಿ.ಮೀ.ಗೆ ಒಂದು ಲಕ್ಷ. ಯಾವ ಮೂಲೆಗೆ? ಕಂಟ್ರ್ಯಾಕ್ಟರ್‌ಗಳಿಗೆ ಇಂಜಿನಿಯರ್‌ಗಳಿಗೆ ಅನುಕೂಲವಾಗುತ್ತದೆ.ಒಂದು ಲಕ್ಷ ರೂಪಾಯಿ ಈಗ ಹಾಕಿ ಹೋಗುತ್ತಾರೆ, ಅವರಿಬ್ಬರೂ ಮಳೆ ಬರುವುದನ್ನೆ ಕಾಯುತ್ತಿರುತ್ತಾರೆ, ಬೆಳಿಗ್ಗೆ ಹೋಯಿತು ಎಂದು ಹೇಳುತ್ತಾರೆ.ನಾವು ಅಲ್ಲಿ ಹೇಗೆ ಪ್ರಯಾಣಿಸಬೇಕು? ದಯಮಾಡಿ ತಾವು ಇನ್ನೊಂದು ಸಜೆಷನ್ ಮಾಡಿದ್ದೀರಿ. ಯಾವದೂ World Bank ಸ್ಕೀಂ ನಲ್ಲಿ ಇದನ್ನು ಸೇರಿಸುತ್ತಿದ್ದೇವೆ ಎನ್ನುವ ಪ್ರಸ್ತಾಪ ಇಟ್ಟಿದ್ದೀರಿ. ಅದು ಯಾವ ಕಾಲಕ್ಕೆ ಬರುತ್ತದೆಯೋ, ಯಾವ ಬ್ಯಾಂಕೋ, ಎಲ್ಲಿ ಬರುತ್ತದೆಯೋ, ಏನಾ-ಗುತ್ತದೆ, ನಾವು ಅಸಾಯಕರಾಗಿ ಮಾತನಾಡುತ್ತಿದ್ದೇವೆಯೋ ಅಥವಾ ಏನು ಮಾಡುತ್ತಿದ್ದೇವೆಂದು ನಮಗೇ ಅರ್ಥವಾಗುತ್ತಿಲ್ಲ. ದಯಮಾಡಿ ಈ ರಸ್ತೆಯನ್ನು ತಾವು ಯಾವುದಾದರೂ ನಮ್ಮ ರಾಜ್ಯ ಬೇರೆ ಯೋಜನೆಯಲ್ಲಿ ಅದು ಅಪೆಂಡಿಕ್ಸ್-ಇ ಇರಬಹುದು, ಬೇರೆ ಬೇರೆ ಎಸ್‌ಹೆಚ್‌ಡಿಪಿ ಇರಬಹುದು, ಯಾವ ಸ್ಕೀಂನಲ್ಲಾದರೂ ಮಾಡಿ.ತಾವು ಅನೇಕ ಯೋಜನೆಗಳನ್ನು ಈಗ ಮಾಡುತ್ತಿದ್ದೀರಿ.ಅದರಲ್ಲಿ ಇದನ್ನು ಸೇರಿಸಿ ಪುಣ್ಯ ಕಟ್ಟಿಕೊಳ್ಳಿ. ಏಕೆಂದರೆ, ಇದರಲ್ಲಿ ಐದು ವಿಧಾನ ಸಭಾ ಕ್ಷೇತ್ರಗಳು ಬರುವ ವಿಚಾರ. ನಾವು ಅಲ್ಲಿತಿರುಗಾಡುವುದಕ್ಕೆ ಒಂದು ಅವಕಾಶ ಮಾಡಿಕೊಡಿ ಎಂದು ನಿಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಎ.ಮಂಜು (ಅರಕಲಗೂಡು) :-ನಮ್ಮ ಕುಮಾರಸ್ವಾಮಿವರು ಮಾತನಾಡಿದರು. ಅಲ್ಲಿ ಹೆಚ್ಚಿನ ಭಾಗ ನಮ್ಮ ಕ್ಷೇತ್ರದಲ್ಲಿ ಬರುವುದು. ನಾನು ಹಲವಾರು ಬಾರಿ ಮಾನ್ಯ ಮಂತ್ರಿಗಳಲ್ಲಿ ಈ ಬಗ್ಗೆ ಮನವಿ ಮಾಡಿಕೊಂಡಿದ್ದೇನೆ. ಬಹುಶ:೨೦೦೨-೨೦೦೮ ರಲ್ಲಿ K-SHIP ೨ ರಲ್ಲಿ ಮೂರು ಸಾವಿರ ಚಿಲ್ಲರೆ ಕಿ.ಮಿ. ಸೇರಿದಾಗ ಈ ರಸ್ತೆಯೂ ಕೂಡ ಸೇರಿತ್ತು. ಸರ್ಕಾರ ಬಂದ ನಂತರ ಇವರು ಇದನ್ನು ಬದಲಾವಣೆ ಮಾಡಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರಕ್ಕೆ ಹಾಕಿಕೊಂಡಿದ್ದಕ್ಕೆ ನಾವೆಲ್ಲರೂ ಆಗ ವಂಚಿತರಾದೆವು. ಆಗ ಇದು ಮೂರು ಬಾರಿ ಸದನದಲ್ಲಿ

ಮಾನ್ಯ ಸಚಿವರು ನಮಗೆ ಉತ್ತರ ಕೊಟ್ಟು ಪ್ರಾಮಿಸ್ ಮಾಡಿ ಈ ಕೆಲಸ ಮಾಡಿಸಿ ಕೊಡುತ್ತೇನೆಂದು ಹೇಳಿದ್ದುಂಟು ಎನ್ನುವುದು ಅವರಿಗೂ ಗೊತ್ತಿದೆ, ಈ ಸದನದಲ್ಲಿ ರೆಕಾರ್ಡ್ ಕೂಡ ಆಗಿದೆ.ಇಲ್ಲಿಯವರೆಗೆ ೧೩ ಪಾಯಿಂಟ್‌ಗಳಲ್ಲಿ ಏನು ಕೊಟ್ಟಿದ್ದಾರೆ, ಆ ಗುಂಡಿ ಮುಚ್ಚಿದ್ದೇವೆಂದು ಏನು ಹೇಳಿದ್ದಾರೆ, ದಯಮಾಡಿ ಅಲ್ಲಿ ಟಾರ್ ರೋಡೇ ಇಲ್ಲ.ಯಾರಾದರೂ ಆ ರಸ್ತೆಯನ್ನು ನೋಡಿದರೆ, ತಾವಂತೂ ಬರಲ್ಲ ಬಿಡಿ. ಅಧಿಕಾರಿಗಳನ್ನು ಕಳುಹಿಸಿ ನೋಡಿ, ಅವರಿಗೇನಾದರೂ ಟಾರ್ ಕಂಡರೆ ನೀವು ಪ್ಯಾಚ್ ಹಾಕಬಹುದು,ಟಾರ್ ಇಲ್ಲ ಎಂದ ಮೇಲೆ ನೀವು ಪ್ಯಾಚ್ ಹೇಗೆ ಹಾಕುತ್ತೀರಿ ಎನ್ನುವುದು ನನ್ನ ಪ್ರಶ್ನೆ.

ಮುಂದಿನ ದಿನಗಳಲ್ಲಿ ಅಲ್ಲಿಗೆ ರಸ್ತೆಯನ್ನು ಮಾಡಿಸಿಕೊಡುತ್ತೇನೆಂದು ನೀವೂ ಕೂಡ ಬಸವಾಪಟ್ಟಣ ಕ್ಷೇತ್ರಕ್ಕೆ ಬಂದಿದ್ದಾಗ ಭರವಸೆ ಕೊಟ್ಟಿದ್ದೀರಿ ಪತ್ರಿಕಾ ಹೇಳಿಕೆ ಕೂಡ ಕೊಟ್ಟಿದ್ದೀರಿ. ಈ ವಿಷಯ ಪತ್ರಿಕೆಯಲ್ಲಿ ಪ್ರಚಾರ ಕೂಡ ಆಗಿದೆ. ಬಹುಶ: ನೀವು ಅಲ್ಲಿ ಹೇಳಿರುವುದರಿಂದ ಈಗ ಮಾಡಿಕೊಡಿ. ಮಾನ್ಯ ಕುಮಾರಸ್ವಾಮಿಯವರೂ ಸಹ ಅಲ್ಲಿಗೆ ಬಂದಿದ್ದಾಗ ಮುಂದಿನ ಮುಖ್ಯ ಮಂತ್ರಿಯಾಗಿ ಮಾನ್ಯಯಡಿಯೂರಪ್ಪನವರನ್ನು ಮಾಡುತ್ತೇನೆಂದು ಹೇಳಿದ್ದರು. ಇದು ಏನಾಯಿತೆಂದು ತಮಗೆ ಗೊತ್ತಿದೆ. ಆದ್ದರಿಂದ, ನೀವು ಅಲ್ಲಿ ಹೇಳಿರುವ ಪ್ರಕಾರ ಮಾಡಿದರೆ ನಿಮಗೆ ಒಳ್ಳೆಯದಾಗುತ್ತದೆ.ನೀವು ಏನುಮಾತನ್ನು ಕೊಟ್ಟಿದ್ದೀರೋ ಆ ಮಾತನ್ನು ಉಳಿಸಿಕೊಳ್ಳಿ ಎಂದು ತಮ್ಮಲ್ಲಿ ನಾವುಗಳು ಕೈಮುಗಿದು ಕೇಳಿಕೊಳ್ಳುತ್ತೇವೆ. World Bank Agency ಗೆ ಇದನ್ನು ಕೊಟ್ಟಿದ್ದೇವೆಂದು ತಾವು ಹೇಳಿದ್ದೀರಿ. World Bank Agency ಗೆ ಇದನ್ನು ಏಕೆ ಕೊಡುತ್ತೀರಿ?World Bank Agency ಗೆ ಕೊಡುವುದರ ಬದಲುStateನಲ್ಲಿ ನಿಮ್ಮ ಇಲಾಖೆಯಲ್ಲಿ ಇರತಕ್ಕಂಥದ್ದಕ್ಕೇ ಇದನ್ನು ಕೊಡಿ. ಈಬಗ್ಗೆ ತಾವು ದಯಮಾಡಿ ಉದಾಸೀನ ಮಾಡಬೇಡಿ. ಈ ಭಾಗದಲ್ಲಿಬಹುಶ: ಬಿಜೆಪಿ ಶಾಸಕರು ಇಲ್ಲವೆಂದು ತಾವು ಮಾಡಿಲ್ಲವೆಂಬ ಭಾವನೆ ನನಗೆ ಬಂದಿದೆ. ಏಕೆಂದರೆ, ತಾವು

ಈಗ ಮಾಡಿರುವುದನ್ನು ನೋಡಿದರೆ ಅದೇ ರೀತಿ ಕಾಣುತ್ತದೆ. ಕಳೆದ ನಾಲ್ಕುವರೆ ವರ್ಷಗಳಿಂದರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚಿದ್ದೇವೆಂದು ದುಡ್ಡು ತೆಗೆದುಕೊಂಡಿದ್ದೀರಾ ಹೊರತು ಕೆಲಸ ಮಾತ್ರ ಆಗಿಲ್ಲ. ತಾವು ಈಗಾಗಲೇ ಹೇಳಿದ ಹಾಗೆ ಏಜೆನ್ಸಿ ಕಡೆಯಿಂದ ಮಾಡಿಸುತ್ತೇವೆಂದರೆ ಅದನ್ನು ನಾವು ಒಪ್ಪುವುದಿಲ್ಲ. State ನಿಂದಲೇ ಈ ರಸ್ತೆಯನ್ನು ಮಾಡಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಎಂ.ಉದಾಸಿ:- ಮಾನ್ಯ ಉಪಾಧ್ಯಕ್ಷರೆ, ಈ ರಸ್ತೆಗಳ ಬಗ್ಗೆ ನಾವು ಕೊಟ್ಟಿರುವ ಮಾಹಿತಿಯ ಪ್ರಕಾರ ೧೩ ಹಂತದಲ್ಲಿ ಬೇರೆ ಬೇರೆ ಇಲಾಖೆಗಳಿಂದ ಹಣವನ್ನು ಮಂಜೂರಾತಿ ಮಾಡಿ ಕೆಲಸ ಮಾಡುತ್ತಿರುವುದನ್ನು ಅವರ ಗಮನಕ್ಕೆ ತರುವಂಥ ಕೆಲಸವನ್ನುನಾನು ಮಾಡಿದ್ದೇನೆ. ಆದರೂ ಸಹ ಅವರು ಸಂಪೂರ್ಣವಾಗಿ ಈ ಕೆಲಸವಾಗಿಲ್ಲವೆಂದು ಹೇಳುತ್ತಿದ್ದಾರೆ. ಇದರಲ್ಲಿ ಕಿ.ಮೀ. ೮೯-೫೭ರಿಂದ ೧೦೩ ವರೆಗೆ ೩೫೦ ಲಕ್ಷ ರೂಪಾಯಿಗೆ ೬/೧೧ರಲ್ಲಿ ಟೆಂಡರ್ ಕರೆಯಲಾಗಿದೆ ಎಂಬ ಬಗ್ಗೆ ವರದಿ ಕೊಟ್ಟಿರುವುದು ಇದೆ. ಈ ಎಲ್ಲ ಅಂಶವನ್ನು ಅವರ ಗಮನಕ್ಕೆ ತರುತ್ತಿದ್ದೇನೆ.World Bank Co-finance ನಿಂದ ಮಾಡಿಸುತ್ತೇನೆಂದು ಹೇಳಿದರೂ ಸಹ ಅವರಿಗೆ ವಿಶ್ವಾಸ ಹುಟ್ಟುತ್ತಿಲ್ಲ. ಅದನ್ನು SHDP ಮೂಲಕ ತೆಗೆದುಕೊಳ್ಳಬೇಕೆಂಬ ಉದ್ದೇಶ ಇಟ್ಟುಕೊಂಡು ಅವರು ಮಾತನಾಡುತ್ತಿದ್ದಾರೆ. World BankCo-finance ಬಗ್ಗೆಇನ್ನೊಂದು ವಾರದಲ್ಲಿ ತೀರ್ಮಾನವಾಗುತ್ತದೆ. ಒಂದು ವೇಳೆ World Bank Co-financeಆಗದೆ ಹೋದರೆ, SHDP ಯಲ್ಲಿ ಸೇರಿಸಿ ಈ ಕೆಲಸವನ್ನು ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ತಂದು ಮಾಡಿಸುವಂಥ ಕೆಲಸವನ್ನು ಮಾಡಿಸುತ್ತೇನೆ. ಈ ೪೦೦ ಕಿ.ಮೀ. ರಸ್ತೆಗೆ World BankCo-finance ಸಿಗುತ್ತದೆಂಬ ಭರವಸೆಯನ್ನುನಾನುಇಟ್ಟುಕೊಂಡಿದ್ದೇನೆ. ಇದು ಸಿಗುವುದಿಲ್ಲವೆಂಬುದರ ಬಗ್ಗೆ ಒಂದು ವಾರದಲ್ಲಿ ಖಾತ್ರಿಯಾದರೆ ಈ ಕೆಲಸವನ್ನು SHDP ಯಲ್ಲಿ ಸೇರಿ ಮಾಡಿಸುವಂಥ ಕೆಲಸವನ್ನು ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎ.ಮಂಜು:- ಅಲ್ಲ ಆಗುವುದಿಲ್ಲವೆಂಬುದು ನಮಗೆ ಗೊತ್ತಿದೆ.

ಶ್ರೀ ಸಿ.ಎಂ.ಉದಾಸಿ:- ಒಂದು ವಾರ ಅವಕಾಶ ಕೊಡಿ.

ಶ್ರೀ ಎ.ಮಂಜು:- ಅದು ಆಗುವುದಿಲ್ಲವೆಂಬುದು ಗೊತ್ತಿದೆ. ಆದ್ದರಿಂದ, SHDP ಯಲ್ಲಿ ಎಷ್ಟು ದಿವಸಗಳಲ್ಲಿ ಮಾಡಿಕೊಡುತ್ತೀರೆಂದು ನಾನು ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತೇನೆ. ತಾವು ಕಳೆದ ನಾಲ್ಕುವರೆ ವರ್ಷಗಳಿಂದ ಇದೇ ಉತ್ತರವನ್ನು ಹೇಳುತ್ತಿದ್ದೀರಿ.

ಶ್ರೀ ಸಿ.ಎಂ.ಉದಾಸಿ:- ಮಾನ್ಯ ಉಪಾಧ್ಯಕ್ಷರೆ, ೨೨೪ ವಿಧಾನಸಭಾ ಕ್ಷೇತ್ರದಲ್ಲಿ ಈಗ ೪೩ ವಿಧಾನಸಭಾ ಕ್ಷೇತ್ರದಲ್ಲಿ ಸೇರದೆ ಇರುವಂಥದನ್ನು ಗಮನಿಸಿ ಅದನ್ನು ಗುರುತಿಸಿಲಾಗಿದೆ. ಇದನ್ನು ಗುರುತಿಸಿಕೊಂಡಿರುವುದಕ್ಕೆ ಈಗ ಮೊದಲ ಹಂತದಲ್ಲಿ ೧೪೦೦ ಕೋಟಿ ರೂಪಾಯಿ ಮೊತ್ತದ ಟೆಂಡರ್ ಕರೆಯಲಾಗಿದೆ. ಮತ್ತೆ ಎರಡನೇ ಹಂತದಲ್ಲಿ ಸಹ ಸುಮಾರು ೧೫ ರಿಂದ ೧೭ ಸಾವಿರ ಕೋಟಿ ರೂಪಾಯಿ ಟೆಂಡರ್ ಕರೆಯುತ್ತಿದ್ದೇವೆ. ಆಗ ಈ ರಸ್ತೆಗಳನ್ನು ಸೇರಿಸುವಂಥ ಕೆಲಸವನ್ನು ಮಾಡಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ. ಇನ್ನೊಂದು ವಾರದಲ್ಲಿ World Bank Co-finance ಬಗ್ಗೆ final ಆಗುತ್ತದೆ. ಅದು final ಆದ ಕೂಡಲೇ ಇದನ್ನು ಮಾಡಿಸಿಕೊಡುವ ಕೆಲಸವನ್ನು ಮಾಡುತ್ತೇವೆ.

ಶ್ರೀ ಎ.ಮಂಜು:- ಅದು final ಆಗುವುದಿಲ್ಲ. ಆದ್ದರಿಂದ, SHDP ಯಲ್ಲಿ ಎಷ್ಟು ದಿವಸಗಳಲ್ಲಿ ಮಾಡಿಸಿಕೊಡುತ್ತೀರಿ?

ಶ್ರೀ ಸಿ.ಎಂ.ಉದಾಸಿ:- ಒಂದು ಅಥವಾ ಒಂದೂವರೆ ತಿಂಗಳಲ್ಲಿ ಟೆಂಡರ್ ಆಗುವಂಥ ವ್ಯವಸ್ಥೆಯನ್ನು ಮಾಡಿಸುತ್ತೇವೆ.

ಶ್ರೀ ಎ.ಮಂಜು:- ಈ ಮಾತನ್ನು ನಾಲ್ಕುವರೆ ವರ್ಷಗಳಿಂದ ಹೇಳಿಕೊಂಡು ಬರುತ್ತಿದ್ದೀರಿ. ಆದ್ದರಿಂದ, ಈಗ ತಾವು ಹೇಳಿರುವುದು ನಿಜವೆಂದು ಒಪ್ಪಿಕೊಳ್ಳಬಹುದೇ?

ಶ್ರೀ ಸಿ.ಎಂ.ಉದಾಸಿ:- ಇಷ್ಟೆಲ್ಲ ಕೆಲಸ ಮಾಡಿಸಿದರೂ ಕೂಡ ಮಾಡಿಸಿಲ್ಲವೆಂದು ಹೇಳುತ್ತಿರುವುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎ.ಮಂಜು:- ಈ ಕೆಲಸವನ್ನು ನಂಜುಂಡಪ್ಪ ವರದಿ ಮೇಲೆ ಮಾಡಿದ್ದೀರಿ. ಇದು ರೊಟೀನ್ ವರ್ಕ್ ಆಗಿದೆ. ಇದಕ್ಕೆ ತಾವು ಸ್ಪೆಷಲ್ ಗ್ರ್ಯಾಂಟ್ ಕೊಟ್ಟಿಲ್ಲ. ನೀವು ಹೆಚ್ಚಿಗೆ ಒಂದು ಪೈಸೆ ಸಹ ಇದಕ್ಕಾಗಿ ಕೊಟ್ಟಿಲ್ಲ.

ಶ್ರೀ ಸಿ.ಎಂ.ಉದಾಸಿ:-ಈಗ ಮಾಡಿಸುತ್ತೇನೆಂದು ಹೇಳಿದ್ದೇನೆ.

ಶ್ರೀ ಎ.ಮಂಜು:- ದಯವಿಟ್ಟು ಈ ಬಗ್ಗೆ ಸದನದಲ್ಲಿ ಹೇಳಿ.

ಶ್ರೀ ಸಿ.ಎಂ.ಉದಾಸಿ:- SHDPಯಲ್ಲಿ ಸೇರಿಸಿ ಮಾಡಿಸುವಂಥ ಕೆಲಸವನ್ನು ಮಾಡುತ್ತೇನೆ.

ಶ್ರೀ ಎ.ಮಂಜು:- ಧನ್ಯವಾದಗಳು.

8.ವಿಷಯ:- ಅಂಗನವಾಡಿ ಕಾರ್ಯಕರ್ತರ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ.

ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ):- ಮಾನ್ಯ ಉಪಾಧ್ಯಕ್ಷರೆ,ಅಂಗನವಾಡಿ ಕಾರ್ಯಕರ್ತರ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕಳಕಪ್ಪ ಜಿ.ಬಂಡಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):- ರಾಜ್ಯದಲ್ಲಿ 64518 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಈ ಕೇಂದ್ರಗಳಲ್ಲಿ 62306 ಅಂಗನವಾಡಿ ಕಾರ್ಯಕರ್ತೆಯರು, 57575 ಅಂಗನವಾಡಿ ಸಹಾಯಕಿಯರು ಕಾರ್ಯನಿರ್ವಹಿಸುತ್ತಿದ್ದಾರೆ. ಅಂಗನವಾಡಿ ಕಾರ್ಯಕರ್ತೆಯರು ಗೌರವಧನದ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದು, 2011–12ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ ರೂ.1500/– ಹಾಗೂ ಅಂಗನವಾಡಿ ಸಹಾಯಕಿಯರಿಗೆ ರೂ.750/– ಹೆಚ್ಚಿಸಿರುತ್ತದೆ. ರಾಜ್ಯ ಸರ್ಕಾರವೂ ಸಹ ಕಾರ್ಯಕರ್ತೆಯರಿಗೆ ರೂ.500/–, ಅಂಗನವಾಡಿ ಸಹಾಯಕಿಯರಿಗೆ ರೂ.250/–ನ್ನು ಹೆಚ್ಚಿಸಿರುತ್ತದೆ.

ಪ್ರಸ್ತುತ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ನೀಡುತ್ತಿರುವ ಗೌರವಧನ